# ಕಾದರೆ ಕೈ ಹಿಡಿಯುತ್ತೆ ಕಾಲ!



**‘ಎಲ್ರ ಕಾಲೆಳೆಯುತ್ತೆ ಕಾಲ’ ಎಂಬ ಕಾಮಿಡಿ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿರುವ ಅರ್ಚನಾ ಕೊಟ್ಟಿಗೆ ಅವರಿಗೆ ತನ್ನ ಕಲ್ಪನೆಯ ಲೋಕದಲ್ಲಿ ಇಲ್ಲದಿರುವಂಥ ಪಾತ್ರಗಳನ್ನು ನಿರ್ವಹಿಸಿ ಗೆಲ್ಲಬೇಕು ಎಂಬ ಮಹತ್ವಾಕಾಂಕ್ಷೆಯೂ ಇದೆ.**

**■ ಪದ್ಮನಾಭ ಭಟ್**

ಸುಜಯ್ ಶಾಸ್ತ್ರಿ ನಿರ್ದೇಶನದ ಚಂದನ್ ಶೆಟ್ಟಿ ನಾಯಕನಾಗಿ ನಟಿಸಿರುವ ‘ಎಲ್ರ ಕಾಲೆಳೆಯುತ್ತೆ ಕಾಲ’ ಸಿನಿಮಾದ ಹಾಡೊಂದು ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ. ಚಿತ್ರತಂಡವೆಲ್ಲ ಒಕ್ಕೊರಲಿನಿಂದ ‘ಎಲ್ರ ಕಾಲೆಳೆಯತ್ತೆ ಕಾಲ’ ಎಂದು ಮತ್ತೆ ಮತ್ತೆ ಹೇಳುತ್ತಿದ್ದರೆ ಆ ಚಿತ್ರದ ನಾಯಕಿ ಅರ್ಚನಾ ಕೊಟ್ಟಿಗೆ ಮಾತ್ರ ‘ಕಾದರೆ ಕೈ ಹಿಡಿಯತ್ತೆ ಕಾಲ’ ಎಂದು ಮುಗುಳುನಗುತ್ತಿದ್ದಾರೆ. ಅವರ ಮಾತಿಗೂ ಮುಗುಳುನಗುವಿಗೂ ಕಾರಣವಿದೆ.

‘ಡಿಯರ್ ಸತ್ಯ’ ಸಿನಿಮಾದ ಮೂಲಕ ಬೆಳ್ಳಿತೆರೆಗೆ ಅಡಿಯಿಟ್ಟ ಅರ್ಚನಾಗೆ ಒಂದು ವಿಚಿತ್ರ ಆಸೆಯಿತ್ತು. ಸಾಮಾನ್ಯವಾಗಿ ಬಣ್ಣದ ಲೋಕಕ್ಕೆ ಅಡಿಯಿಡುವ ಹುಡುಗಿಯರೆಲ್ಲ ಸ್ಟಾರ್ ನಟರ ಸಿನಿಮಾದಲ್ಲಿ ನಟಿಸುವುದಕ್ಕೆ, ಮಹಿಳಾಪ್ರಧಾನ ಪಾತ್ರಗಳಲ್ಲಿ ಕಾಣಿಸಿಕೊಳ್ಳುವುದಕ್ಕೆ ಹಾತೊರೆಯುತ್ತಿದ್ದರೆ ಅರ್ಚನಾ ಮಾತ್ರ ‘ಕಾಮಿಡಿ ಸಿನಿಮಾದಲ್ಲಿ ನಟಿಸಬೇಕು ಎಂಬುದು ನನ್ನ ಕನಸು’ ಎನ್ನುತ್ತಿದ್ದರು. ಅಂಥದ್ದೊಂದು ಅವಕಾಶಕ್ಕಾಗಿ ಅವರು ವರ್ಷಗಳಿಂದ ಕಾಯುತ್ತಿದ್ದರು ಕೂಡ. ಆ ಆಸೆ ಈಗ ‘ಎಲ್ರ ಕಾಲೆಳೆಯುತ್ತೆ ಕಾಲ’ ಸಿನಿಮಾದಲ್ಲಿ ಈಡೇರಿದೆ. ‘ಇಂಥದೊಂದು ಅವಕಾಶಕ್ಕಾಗಿ ತುಂಬ ದಿನಗಳಿಂದ ಕಾಯ್ತಿದ್ದೆ. ಈ ಸಿನಿಮಾ ಸಿಕ್ಕಾಗ ಗಬಕ್ ಅಂತ ಹಿಡ್ಕೊಂಡ್‌ಬಿಟ್ಟೆ’ ಅಂತ ಕಾಮಿಡಿ ಸ್ಟೈಲಿನಲ್ಲಿಯೇ ಹೇಳುತ್ತಾರೆ ಅವರು.

‘ಇದು ಔಟ್ ಆ್ಯಂಡ್ ಔಟ್ ಕಾಮಿಡಿ ಸಿನಿಮಾ. 1980ರ ಕಾಲಘಟ್ಟದಲ್ಲಿ ನಡೆಯುವ ಕಥೆ. ಈ ಸಿನಿಮಾದ ಪಾತ್ರವನ್ನು ನಾನು ಸಖತ್ ಎಂಜಾಯ್ ಮಾಡಿದ್ದೇನೆ. ಸಿನಿಮಾ ನೋಡುವ ಜನರೂ ಅಷ್ಟೇ ಎಂಜಾಯ್ ಮಾಡಲಿದ್ದಾರೆ’ ಎಂದು ನಗುನಗುತ್ತಲೇ ಹೇಳುತ್ತಾರೆ ಅರ್ಚನಾ.

ಈ ಸಿನಿಮಾದ ಪಾತ್ರಕ್ಕೂ ಅರ್ಚನಾ ಅವರ ಗುಣಸ್ವಭಾವಕ್ಕೂ ಸಾಕಷ್ಟು ಸಾಮ್ಯತೆಗಳಿವೆಯಂತೆ. ಹಾಗಾಗಿಯೇ ತನಗೆ ನಟಿಸಲು ಇನ್ನಷ್ಟು ಸುಲಭವಾಯಿತು ಎನ್ನುತ್ತಾರೆ ಅವರು. ‘ಈ ಸಿನಿಮಾದ ಪಾತ್ರಕ್ಕೂ ನನ್ನ ರಿಯಲ್ ಲೈಫ್‌ಗೂ ತುಂಬ ಹೊಂದಾಣಿಕೆ ಆಗುತ್ತದೆ. ನಾನೂ ಜೋರು ಮಾತಾಡುತ್ತೇನೆ, ಫನ್ನಿಯಾಗಿ ಕಾಲೆಳೆಯೋ ಗುಣವೂ ಇದೆ. ಸದಾ ಕಾಲ ಪಟಪಟ ಮಾತಾಡುತ್ತಿರುತ್ತೇನೆ. ಈ ಚಿತ್ರದ ಪಾತ್ರವೂ ಹಾಗೆಯೇ ಇದೆ. ಜೊತೆಗೆ ಪರ್ಫಾರ್ಮೆನ್ಸ್‌ಗೆ ಸಾಕಷ್ಟು ಅವಕಾಶ ಇದೆ. ಹಾಗಾಗಿ ನನ್ನ ಇದುವರೆಗಿನ ಸಿನಿಮಾದಲ್ಲಿ ಇದು ಬಹುನಿರೀಕ್ಷಿತ ಸಿನಿಮಾ’ ಎಂಬುದು ಅರ್ಚನಾ ಸಮರ್ಥನೆ.

ಈ ಚಿತ್ರದಲ್ಲಿ ತಮ್ಮ ಜೊತೆಗೆ ತೆರೆ ಹಂಚಿಕೊಂಡ ಚಂದನ್ ಶೆಟ್ಟಿ ಕುರಿತೂ ಅರ್ಚನಾ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ. ‘ಸಿನಿಮಾ ಒಪ್ಪಿಕೊಂಡಾಗ ಅವರು ಹೇಗೋ ಏನೋ ಎಂಬ